# ನೋಡಿದ್ದೀರಾ ನರಿಕಬ್ಬು?

**ತೋಟದ ಮೂಲೆಯಲ್ಲಿ ಹುಟ್ಟಿ ಬೆಳೆದು ಜಾನುವಾರಿಗೆ ಆಹಾರವಾಗುವ ಈ ನಿಸರ್ಗದ ಕೊಡುಗೆ, ಸಿಹಿ ಕೊಡುವ ಕಬ್ಬು ಅಲ್ಲದೆ ಹೋದರೂ ಅತ್ಯಮೂಲ್ಯ ಮದ್ದು. ಇದರ ತಳಿಯನ್ನು ಉಳಿಸಿ ಬೆಳೆಸುವ ಹೊಣೆ ನಮ್ಮ ಮೇಲಿದೆ.**

ಚಿತ್ರ ಬರಹ:
**ಪ. ರಾಮಕೃಷ್ಣ ಶಾಸ್ತ್ರಿ**





**ಕ**ರಾವಳಿಯ ಕಾಡುಗಳಲ್ಲಿ, ಹಳ್ಳದ ದಂಡೆಗಳಲ್ಲಿ ಬೆರಳಿನ ಗಾತ್ರದ ಕಾಂಡದೊಡನೆ ನೀಳವಾಗಿ ಬೆಳೆಯುವ ನರಿಕಬ್ಬು ಅಪರೂಪವಾಗಿ ಕಾಣಸಿಗುತ್ತದೆ. ಕಾಂಡದಲ್ಲಿ ಕಬ್ಬಿನ ಹೋಲಿಕೆಯಿರುವ ಗಂಟುಗಳಿದ್ದು ಪ್ರತಿ ಗಂಟಿಗೊಂದರಂತೆ ಎಲೆಗಳನ್ನು ಉಳಿಸುತ್ತಾ ತುದಿಯಲ್ಲಿ ಅಧಿಕ ಎಲೆಗಳಿರುತ್ತವೆ. ಇದರ ಎಲೆಗಳು ಬಾಳೆ ಎಲೆಯ ರೀತಿಯಲ್ಲಿದ್ದರೂ ತುದಿ ಅರಳೀ ಎಲೆಯಂತಿದೆ. ಮಳೆಗಾಲದಲ್ಲಿ ಬೆಂಡೆ ಹೂವಿನಂತಹ ಬಿಳಿಯ ಹೂಗಳನ್ನು ಬಿಡುವ ಇದು ತಾನಾಗಿ ಹುಟ್ಟಿ ಬೆಳೆಯುತ್ತದೆ; ಯಾರೂ ಕೃಷಿ ಮಾಡುವುದಿಲ್ಲ. ಇದೊಂದು ವನೌಷಧಿಯೆಂಬುದು ಅನೇಕರಿಗೆ ಗೊತ್ತಿಲ್ಲ.

ದಕ್ಷಿಣ ಏಷ್ಯಾದಿಂದ ಬಂದಿರುವ ಈ ಸಸ್ಯಕ್ಕೆ ಸಸ್ಯಶಾಸ್ತ್ರದಲ್ಲಿ ಕೋಸ್ಟಸ್ ಸ್ಪೆಸಿಯೋಸಸ್ ಎನ್ನುವ ಹೆಸರಿದೆ. ಭಾರತದ ಎಲ್ಲೆಡೆ ಇದನ್ನು ಕಾಣಬಹುದು. ಸುಮಾರಾಗಿ ಶುಂಠಿಯ ಗಿಡದ ಹೋಲಿಕೆ ಈ ಗಿಡಕ್ಕೆ ಇರುವುದರಿಂದ ಇಂಗ್ಲಿಷಿನಲ್ಲಿ ದ್ರಾಕ್ಷೆ ಶುಂಠಿಯೆಂದು ಕರೆಯುತ್ತಾರೆ. ಆಯುರ್ವೇದದಲ್ಲಿ ಚಂಗಲಿಕೋಷ್ಠ ಎಂದು ಹೆಸರಿಟ್ಟು ಇದರ ಔಷಧೀಯ ಉಪಯೋಗಗಳನ್ನು ವಿವರಿಸಲಾಗಿದೆ. ಕನ್ನಡದಲ್ಲಿ ನೀರಜ, ಪದ್ಮಪತ್ರ ಎಂದೂ, ಮಲಯಾಳಂನಲ್ಲಿ ಪುಷ್ಕರಮೂಲ, ತಮಿಳಿನಲ್ಲಿ ಕೋಷ್ಠಂ ಮುಂತಾಗಿ ಪ್ರಾದೇಶಿಕ ಹೆಸರುಗಳಿವೆ. ಚಳಿ ಪ್ರದೇಶವಾದ ಕಾಶ್ಮೀರದಲ್ಲಿಯೂ ಈ ಸಸ್ಯವನ್ನು ಕಾಣಬಹುದು.

ನರಿಕಬ್ಬು ಇಂಡೋನೇಷ್ಯಾದಲ್ಲಿ ಹೇರಳವಾಗಿ ಕಂಡುಬರುತ್ತದೆ. ಫಿಜಿ ಮತ್ತು ಹವಾಯಿ ದ್ವೀಪಗಳಲ್ಲಿ ಇದರ ಚಿಗುರು ಎಲೆಗಳನ್ನು ಬೇಯಿಸಿ ಆಹಾರವಾಗಿ ಬಳಸುತ್ತಾರೆ. ಅಸ್ತಮಾ, ಶ್ವಾಸಕೋಶದ ಕಾಯಿಲೆಗಳು, ದೇಹದೊಳಗಿನ ವ್ರಣಗಳಿಗೆ ಇದರಿಂದ ಚಿಕಿತ್ಸೆ ಮಾಡಲಾಗುತ್ತದೆ. ಇದರ ಚಿಗುರೆಲೆಗಳನ್ನು ಹಲಸಿನ ಬೀಜದ ಜತೆಗೆ ಬೇಯಿಸಿ ಸ್ವಾದಿಷ್ಟವಾದ ಪಲ್ಯ ತಯಾರಿಸುವ ವಿಧಾನ ದಕ್ಷಿಣ ಕನ್ನಡದ ಗೃಹಿಣಿಯರಿಗೆ ಗೊತ್ತಿದೆ. ಎ ಜೀವಸತ್ವದಿಂದ ಕೂಡಿದ ಈ ಎಲೆಗಳು ಕಣ್ಣಿನ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇದರ ಎಲೆಗಳು ನಪುಂಸಕತ್ವವನ್ನು ತೊಲಗಿಸಿ ಕಾಮೋತ್ತೇಜಕವಾಗಿ ಪರಿಣಾಮ ಬೀರುತ್ತವೆ ಎಂದು ವಾತ್ಸ್ಯಾಯನನು ‘ಕಾಮಸೂತ್ರ’ದಲ್ಲಿ ಬಣ್ಣಿಸಿದ್ದಾನೆ.

ಕೇರಳ, ತಮಿಳ್ನಾಡು, ಕರ್ನಾಟಕದ ಕರಾವಳಿಗಳಲ್ಲಿ ಕಣ್ಣನ್ನು ಯಾವುದೇ ರೋಗ ಬಾಧಿಸಿದಾಗಲೂ ಮೊದಲು ಶರಣಾಗುವುದು ನರಿಕಬ್ಬಿಗೆ. ಉರಿಗಣ್ಣು, ಕೆಂಗಣ್ಣು ಇತ್ಯಾದಿ ಬಂದಾಗಲೂ ನರಿಕಬ್ಬನ್ನು ಕಿತ್ತು ತಂದು ಅದರ ಕಾಂಡವನ್ನು ಬೆಂಕಿಯಲ್ಲಿ ಬಾಡಿಸಿ ನೇರವಾಗಿ ಅದರೊಳಗಿರುವ ನೀರನ್ನು ಕಣ್ಣಿಗೆ ಹಿಂಡುತ್ತಾರೆ. ಔಷಧಯುಕ್ತವಾದ ಈ ನೀರು ಕಣ್ಣಿನ ಉರಿಯನ್ನು ಶಾಂತಗೊಳಿಸಿ ವೈರಾಣುಗಳನ್ನು ನಿವಾರಿಸುತ್ತದೆ. ಕಣ್ಣಿನ ಸೌಂದರ್ಯ ಹೆಚ್ಚಿಸುವ ಕಾಸ್ಮೆಟಿಕ್ಸ್‌ಗಳನ್ನೂ ಇದರ ಎಲೆಗಳಿಂದ ತಯಾರಿಸಲಾಗುತ್ತದೆ.

ತೋಟದ ಮೂಲೆಯಲ್ಲಿ ಹುಟ್ಟಿ ಬೆಳೆದು ಜಾನುವಾರಿಗೆ ಆಹಾರವಾಗುವ ಈ ನಿಸರ್ಗದ ಕೊಡುಗೆ, ಸಿಹಿ ಕೊಡುವ ಕಬ್ಬು ಅಲ್ಲದೆ ಹೋದರೂ ಅತ್ಯಮೂಲ್ಯ ಮದ್ದು ಆಗಿರುವುದರಿಂದ ಅದರ ತಳಿಯನ್ನು ಉಳಿಸುವ ಹೊಣೆ ನಿಸರ್ಗಪ್ರಿಯರ ಮೇಲಿದೆ.